ನನ್ನನ್ನೂ ತನ್ವಿಯನ್ನೂ ಸಾಗಿಸುತ್ತಿದ್ದ ಔಟರ್ ರಿಂಗ್‌ರೋಡು– ಹೆಬ್ಬಾಳದ ಕ್ಲೊವರ್‌ಲೀಫ್‌ನಲ್ಲೊಮ್ಮೆ ಜೋಲಿ ಹೊಡೆದು, ಒಂದೆರಡು ಕಿಮೀ ಮುನ್ನಡೆದು, ತಣಿಸಂದ್ರವೆಂಬ ಬಳಿ ತುಸುವೇ ಎಡಕ್ಕೆ ಹೊರಳಿ, ಮರಳಿ ನೇರಗೊಳ್ಳುವ ಹೊತ್ತಿನಲ್ಲಿ ಗೊತ್ತಿನಲ್ಲಿ ಪಾ ನಿರ್ದೇಶಿಸಿದ್ದ ಹಾಗೇ ಸರಿಯಾಗಿ, ಬಲಗಡೆಯ ಮೂಲೆಯಲ್ಲಿ ಏಳಂತಸ್ತಿನೆತ್ತರಕ್ಕೆ ಆಕಾಶಕ್ಕೆ ಹಬ್ಬಿರುವ 'ದ್ಯುಮ್ನ ಸ್ಪ್ರಿಂಗ್ಸ್' ಹೋಟೆಲು ಸಂಜೆಗತ್ತಲಿನಲ್ಲಿ ಕೋರೈಸಿಕೊಂಡು ಎದುರಾಯಿತು. 'ಅಲ್ಲೇ ಸಿಗುತ್ತೆ, ಸಿದ್ಧ್... ಮಿಸ್ಸಾಗೋ ಚಾನ್ಸೇ ಇಲ್ಲ. ಏಳೂವರೆಗೆಲ್ಲ ಅಲ್ಲಿಗೆ ಬಂದುಬಿಡು. ನಾನೂ ನಿಮ್ಮಮ್ಮನ್ನ ಕರಕೊಂಡು ಬಂದುಬಿಡುತೀನಿ...' ಇಷ್ಟು ಹೇಳಿದ ಮೇಲೆ, ಪಾ, ಈ ಹೋಟೆಲು ತಲುಪುವ ದಾರಿಯನ್ನು ಧ್ಯಾಸಕ್ಕೆ ಪೂರ್ತಿಕವಿಗೊಡದೆಯೂ ಅರ್ಥವಾಗುವ ಹಾಗೆ, ಮತ್ತೆ ಮತ್ತೆ ರಿಪೀಟುಗೈದು ಮನದಟ್ಟು ಮಾಡಿದ್ದ. 'ದ್ಯುಮ್ನ ಸ್ಪ್ರಿಂಗ್ಸ್ ಅನ್ನೋ ಬೋರ್ಡು ಫ್ಲಯೋವರಿನಿಂದಲೇ ಕಾಣುತ್ತೆ, ಕಿಡೋ... ಅಲ್ಲೇ ಟೆರೇಸ್ ಫ್ಲೋರಿನಲ್ಲಿ ಅಮರಾವತಿ ಜಾಯಿಂಟ್ ಇದೆ. ಸ್ವಲ್ಪ ಸ್ಪೈಸಿ ಅನ್ನೋದು ಬಿಟ್ಟರೆ, ಊಟ ಚೆನ್ನಾಗಿರುತ್ತೆ... ಎಲ್ಲಕ್ಕಿಂತ ಇಟ್ ವಿಲ್ ಬಿ ವೆರಿ ಕಾಮ್ ಅಂಡ್ ಕೋಸಿ.... ಅದು ತಾನೇ ಮುಖ್ಯ?!' ಎಂದೆಲ್ಲ ಸೂಚ್ಯವಿಡುತ್ತ ಅವನು ಮತ್ತಷ್ಟು ವಿವರಣೆಗೆ ತೊಡಗುವಾಗ, 'ಪಾ... ಲೆಟ್ಸ್ ಸ್ಟಾಪ್ ಇಟ್ ನವ್. ಹೇಗಿದ್ದರೂ ಫೋನಿದೆ. ಜೀಪೀಎಸ್ಸಿದೆ. ಗೂಗಲಿದೆ... ಐ ಕೆನ್ ಫೈಂಡೌಟ್...' ಅಂತಂದು ಮಾತು ಮೊಟುಕಿ, 'ನಿನ್ನ ಮಗ ಏಕಾಏಕಿ ಆ ತಾಲಿಬಾನ್‌ಗಳ ನೆಲದಲ್ಲಿ ಏಗಿಬಂದಿದ್ದಾನೆ ಗೊತ್ತಾ? ಇನ್ನು ನಾನು ಹುಟ್ಟಿ ಬೆಳೆದ ಬೆಂಗಳೂರೇನು ಮಹಾ?!' ಎಂದೊಂದು ಕೊಸರನ್ನೂ ಆಡಿ ಮೊಬೈಲು ಮಗುಚಿದ್ದೆ. ಅಪ್ಪ ಮಗನ ಅರ್ಧ ತಾಸಿಗೂ ಹೆಚ್ಚು ಫೋನಾಡಿಕೆಯನ್ನು ಬಲು ಸಹನೆಯಿಂದ ಕೇಳಿಸಿಕೊಂಡಿದ್ದ ತನ್ವಿ, ಮಾತು ಮುಗಿದಿದ್ದೇ ನನ್ನತ್ತಲೊಂದು ಮುಗುಳ್ನಗೆಯೆಸೆದು ಸುಮ್ಮನುಳಿದಳು. ನಗುವಿನಲ್ಲೇ ನೂರಾರು ಆಡಬಲ್ಲ ಚತುರೆ ಅವಳು.

ತಣಿಸಂದ್ರವನ್ನು ಗೂಗಲು ನಕ್ಷೆಯಲ್ಲಿ ಗುರುತಿಸಿ, ಹೆಬ್ಬಾಳವನ್ನು ದಾಟಿದ್ದೇ 'ಇನ್ನೇನು, ಒಂದು ಹತ್ತು ನಿಮಿಷ ಆಗಬಹುದೇನೋ... ವಿ ಆರ್ ಆಲ್ಮೋಸ್ಟ್ ದೇರ್...' ಎನ್ನುತ್ತ ತನ್ವಿ ನಾವು ಕೈಕೊಂಡ ದಾರಿ ಸರಿಯಿದೆಯೆಂದು ಪುಷ್ಟೀಕರಿಸಿದಳು. 'ತಾನ್ ತಾನ್ ತಾನ್... ಜಸ್ಟ್ ಲುಕ್ ಟು ಯುವರ್ ಲೆಫ್ಟ್... ಅಲ್ಲಿ ವಿದ್ಯಾನಿಕೇತನ್ ಅಂತ ಬರೆದಿದೆಯಲ್ಲ, ದಟ್ಸ್ ವೇರ್ ಐ ಸ್ಕೂಲ್ಡ್ ಫಾರ್ ಟೆನ್ ಇಯರ್ಸ್...' ಎಂದು, ರಸ್ತೆಯ ಎಡಬದಿಗೆ ತೋರಿಬಂದ ನಾನು ಕಲಿತ ಶಾಲೆಯ ಕಟ್ಟಡವನ್ನು ಅವಳಿಗೆ ತೋರಿಸುತ್ತ ಹೇಳಿದೆ. ಬಿಲ್ಡಿಂಗು ಅಂತಂತೆಯೇ ಇದ್ದರೂ ನೆರೆಹೊರೆಯಷ್ಟೂ ಥರಾವರಿಯಾಗಿ ಬದಲಿಹೋಗಿತ್ತು. ಹೆಬ್ಬಾಳದ ಕೆರೆಯೇ ಕಾಣಿಸಿಗದಷ್ಟು ಎತ್ತೆತ್ತರದ ದೈತ್ಯ ಬೆಳವಣಿಗೆ. 'ದೇಶ ಬಿಟ್ಟು ಹೋಗಿ, ಐದು ವರ್ಷ ಆದವೇನೋ ಅಷ್ಟೆ... ಆದರೆ ಇಲ್ಲಿ ಊರಿಗೆ ಊರೇ ಚಹರೆ ಬದಲಿಸಿಕೊಂಡುಬಿಟ್ಟಿದೆ... ಹಾಗೇ, ನನ್ನ ಇಲ್ಲಿನ ಪರಿಸ್ಥಿತಿಯ